

ಸೆಲೆ ಕಡಿಮೆಯಾಗುತ್ತಿದ್ದರಿಂದ ಲೋಟದಿಂದ ನೀರು ತುಂಬಿ ಬಿಂದಿಗೆ ತುಂಬಿಸಿಕೊಳ್ಳಬೇಕಾಗುತ್ತಿತ್ತು. ಸೆಲೆ ಕಡಿಮೆಯಿದ್ದಾಗ ನೀರಿನೊಂದಿಗೆ ಮಣ್ಣಿನ ಅಂಶವೂ ನೀರಿನೊಂದಿಗೆ ಬರುತ್ತಿದ್ದುದರಿಂದ ಬಿಂದಿಗೆ ಬಾಯಿಗೆ ತೆಳುವಾದ ಬಟ್ಟೆ ಕಟ್ಟಿ ಬಸಿದುಕೊಳ್ಳಬೇಕಾಗುತ್ತಿತ್ತು. ಹಾಗಾಗಿ ಬೇಸಿಗೆಯಲ್ಲಿ ರಾತ್ರಿಯಲ್ಲೇ ಪಾಳಿಯಲ್ಲಿ ನಿಂತು ಬೆಳಗಿನವರೆಗೆ ಕಾಯ್ದು ನೀರನ್ನು ತರಬೇಕಾಗುತ್ತಿತ್ತು. ಹದಿಹರೆಯದ ಹುಡುಗ ಹುಡುಗಿಯರಿಗೇನೋ ಇದು ಮಜಾ ಕೊಡುತ್ತಿತ್ತು. ಆದರೆ ವಯಸ್ಸಾದವರಿಗೆ ಬೇಸಿಗೆಯಲ್ಲಿ ನಿದ್ದೆಗೆಟ್ಟು ಒರತೆ ನೀರು ತರುವುದು ದುಸ್ತರವಾಗುತ್ತಿದ್ದುದು ಒಂದು ಕಡೆಯಾದರೆ, ಕಣ್ಣು ಮಂಜಾದವರಿಗೆ ಒರತೆಯ ಕಲ್ಲು ಸಂದಿಗಳಲ್ಲಿರುತ್ತಿದ್ದ ಹಾವು, ಚೇಳು ಮತ್ತು ಏಡಿಗಳ ಹೆದರಿಕೆಯೂ ಇತ್ತು. ಕೆಲವು ಜನರು ಒರತೆಯಲ್ಲಿ ರೆಕ್ಕೆ ಚೇಳುಗಳಿಂದ ಕುಟುಕಿಸಿಕೊಂಡು ಖಾಲಿ ಬಿಂದಿಗೆ ಹಿಡಿದು ಅಳುತ್ತಾ ಮರಳಿ ಬಂದದ್ದುಂಟು.

ಒಂದೂವರೆ ಕಿಲೋಮೀಟರು ತುಂಬಿದ ಬಿಂದಿಗೆ ಹಿಡಿದು ನಡೆದುಬರುವುದೆಂದರೆ ಸುಲಭದ ಮಾತಲ್ಲ. ಗಂಡಸರು ಬಿಂದಿಗೆ ಹೊತ್ತ ಒಂದು ಭುಜ ನೋವಾದರೆ, ಬಿಂದಿಗೆಯನ್ನು ಇನ್ನೊಂದು ಭುಜಕ್ಕೆ ವರ್ಗಾಯಿಸಿಕೊಳ್ಳಬೇಕಾಗುತ್ತಿತ್ತು. ಬಿಂದಿಗೆ ಹೊತ್ತು ಹೊತ್ತು ಭುಜಗಳು ಮರಗಟ್ಟಿ ಕಲೆಗಳನ್ನು ಉಳಿಬಿಡುತ್ತಿದ್ದವು. ಇನ್ನು ಹೆಣ್ಣುಮಕ್ಕಳಿಗೆ ಕತ್ತು ನೋವು ಸೊಂಟ ನೋವು ಕಾಣಿಸಿಕೊಳ್ಳುತ್ತಿದ್ದವು. ಆದರೆ ಆರು ಮೂರಾಗಲಿ, ಮೂರು ಆರಾಗಲಿ, ಒರತೆ ನೀರು ತರುವುದನ್ನು ಬಿಡುತ್ತಿರಲಿಲ್ಲ.

ಒಂದು ಬಾರಿ ಸಿದ್ಧಲಿಂಗೇಶ್ವರ ಗುಡ್ಡದ ಹತ್ತಿರ ಕುರಿ ಕಾಯೋ ಮರಿಯಪ್ಪನ ಎರಡು ಕುರಿ ಮರಿಗಳನ್ನು ಎಲ್ಲಿಂದಲೋ ಬಂದು ಗುಡ್ಡದಲ್ಲಿ ಅವಿತುಕೊಂಡಿದ್ದ ತೋಳ ತಿಂದುಬಿಟ್ಟಿತ್ತಂತೆ. ಅರಣ್ಯ ಇಲಾಖೆಯವರು ಬೋನಿಟ್ಟು ತೋಳವನ್ನು ಹಿಡಿಯಲು ಎಷ್ಟೇ ಪ್ರಯತ್ನಪಟ್ಟರೂ ಅದು ಸಿಕ್ಕಿಹಾಕಿಕೊಳ್ಳಲಿಲ್ಲ. ಒರತೆ ಗುಡ್ಡದ ಇಳಿಜಾರಿಗೇ ಇರುವುದರಿಂದ ತೋಳಕ್ಕೆ ಅಂಜಿ, ಆ ಎರಡು ತಿಂಗಳು ಹೆಚ್ಚು ಜನ ಒರತೆ ನೀರು ತರಲು ಹಿಂಜರಿಯುತ್ತಿದ್ದರು. ಒರತೆ ನೀರಿಲ್ಲದೇ ನಳದ ನೀರನ್ನು ಎಷ್ಟೇ ಕುಡಿದರೂ ಬಾಯಾರಿಕೆ ನೀಗುತ್ತಿರಲಿಲ್ಲ, ದಣಿವಾರುತ್ತಿರಲಿಲ್ಲ. ನೀರು ತರುವ ಜನರಿಲ್ಲದಿದ್ದುದರಿಂದ ಒರತೆಯಲ್ಲಿ ಹಾವು, ಚೇಳು ಏಡಿಗಳು ಕಲ್ಲಿನ ಪೊಟರೆಗಳಿಂದ ಹೊರಬಂದು ಸ್ವಚ್ಛಂದವಾಗಿ ಆಡಿಕೊಂಡಿದ್ದವು. ಇನ್ನೆಷ್ಟು ದಿವಸ ಜನ ಹೀಗೇ ತೋಳಕ್ಕೆ ಅಂಜಿ ಒರತೆ ನೀರಿಲ್ಲದೇ ಸುಮ್ಮನಿದ್ದಾರು? ಊರಿನಲ್ಲಿ ತೋಳದ ಸುದ್ದಿ ಮಸುಕಾದೊಡನೆ ಮತ್ತೆ ಒರತೆಯ ಕಡೆಗೆ ಜನ ಹೊರಡಲು ಶುರುವಾದರು. ಒರತೆಯ ಸುತ್ತಲಿದ್ದ ಜೌಗು ಮಣ್ಣಿನಲ್ಲಿ ತೋಳದ ಹೆಜ್ಜೆ ಗುರುತು ಕಂಡಿದ್ದ ಕೆಲವರಿಗೆ ಇನ್ನೂ ಕೆಲವು ದಿನ ಬರದಿರುವುದೇ ಒಳಿತು ಎನಿಸಿತ್ತು.

ಇಡೀ ಊರೇ ಒರತೆ ನೀರನ್ನು ಉಪಯೋಗಿಸಿದರೂ ಹೊಲೆಯರಿಗೆ ಮಾತ್ರ ನಿರ್ಬಂಧವಿತ್ತು. ಒರತೆಯ ಬಳಿ ಸುಳಿಯಲೂ ಅವರಿಗೆ ಅನುಮತಿ ಇರಲಿಲ್ಲ. ಒಂದು ವೇಳೆ ಅಲ್ಲೆಲ್ಲೋ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಅವರಿಗೆ ಬಾಯಾರಿಕೆಯಾದರೆ ಒರತೆಯ ಸ್ವಲ್ಪ ದೂರದಲ್ಲಿ ನಿಂತು ಬೊಗಸೆಯಲ್ಲಿ ಒರತೆ ನೀರನ್ನು ಹಾಕಿಸಿಕೊಂಡು ಕುಡಿಯಬೇಕಾಗಿತ್ತು. ಪ್ರಕೃತಿಯ ಸ್ವತ್ತಾದ ಆ ಒರತೆಯ ನೀರು ಯಾರಪ್ಪನ ಆಸ್ತಿ? ಇದೆಲ್ಲ ಗೊತ್ತಿದ್ದೂ ಮಡಿ ಮೈಲಿಗೆಯ ಹೆಸರಲ್ಲಿ ಇಂದಿಗೂ ಈ ಅಸ್ಪೃಶ್ಯತೆ ಚಾಲ್ತಿಯಲ್ಲಿರುವುದು ಬೇಸರದ ಸಂಗತಿ. ಈಗಿನ ಕೆಲವು ತಿಳಿವಳಿಕೆ ಇದ್ದ ಮೇಲ್ವರ್ಗದವರು, ‘ಉಪಯೋಗಿಸಿಕೊಳ್ಳಲಿ ಏನು ತಪ್ಪು?’ ಎಂದರೆ, ‘ಉಪಯೋಗಿಸಿಕೊಳ್ಳಲಿ. ಆದರೆ ಸ್ವಚ್ಛತೆ ಕಾಪಾಡಲಿ’ ಎಂದು ಅಡ್ಡ ಗೋಡೆಯ ಮೇಲೆ ದೀಪವಿಡುವವರು, ‘ಅವರಿಗೆ ಯಾವ ಕಾರಣಕ್ಕೂ ಒರತೆಯ ನೀರು ಮುಟ್ಟುವ ಅನುಮತಿ ಇಲ್ಲ’ ಎನ್ನುವ ಹಳೆ ಕಾಲದ ಮಡಿವಂತ ವೃದ್ಧ ವೃದ್ಧೆಯರು.

ಕೆಲವು ಹದಿಹರೆಯದ ಹುಡುಗರು ತಮ್ಮನ್ನು ಒರತೆಗೆ ಬಾರದಂತೆ ನಿರ್ಬಂಧಿಸಿರುವುದನ್ನು ಆಗಾಗ ಮೌಖಿಕವಾಗಿ ವಿರೋಧಿಸುತ್ತಿದ್ದರು. ಒಂದು ಬಾರಿ ಕೆಲವು ಹುಡುಗರು ಗುಂಪುಗೂಡಿ ಬಿಂದಿಗೆ ಹಿಡಿದು, ‘ಏನ್ ಮಾಡತಾರೆ, ನೋಡೇಬಿಡೋಣ’ ಎಂದು ಬಿಂದಿಗೆ ಎತ್ತಿಕೊಂಡು ಒರತೆಯತ್ತ ಹೊರಟೇಬಿಟ್ಟರು. ಅಲ್ಲಿ ಒರತೆಯ ಹತ್ತಿರವಿದ್ದ ಜನರು ತಡೆದು ನಿಲ್ಲಿಸಿದಾಗ ಇನ್ನೇನು ಮಾರಾಮಾರಿ ನಡೆದು ಹೋಗುವುದರಲ್ಲಿತ್ತು. ಅಷ್ಟರಲ್ಲಿ ಊರಿನ ಕೆಲವು ಹಿರಿಯರು ಹುಡುಗರನ್ನು ಸಮಾಧಾನಪಡಿಸಿ ಆಗುವ ಅನಾಹುತವನ್ನು ತಡೆದರು. ಇಲ್ಲದಿದ್ದರೆ ದೊಡ್ಡ ದುರಂತವೇ ನಡೆದುಹೋಗುತ್ತಿತ್ತು.

ಇತ್ತೀಚೆಗೆ ಕುರಿ ಕಾಯುವವರು ಕುರಿಗಳನ್ನು, ದನ ಕಾಯುವವರು ದನಗಳನ್ನು ಒರತೆಯಲ್ಲಿ ಬಿಟ್ಟು ನೀರನ್ನು ಕುಡಿಸಿದರಂತೆ ಎಂಬ ಸುದ್ದಿ ಊರು ತುಂಬ ಹರಡಿತ್ತು. ಹೊಲೆಯರದು ಅದೇ ವಾದ, ‘ಕುರಿ ದನಗಳು ಒರತೆ ನೀರನ್ನು ಕುಡಿಯುತ್ತಿರುವಾಗ, ನಾವು ಕುರಿ ದನಗಳಿಗಿಂತಲೂ ಕಡೆಯಾದೆವಾ?’ ಅವರ ವಾದ ಸಮಂಜಸವೂ ಹೌದು. ಇವರ ಪ್ರಶ್ನೆಗೆ ಊರಿನ ಯಾರ ಬಳಿಯೂ ಉತ್ತರವಿಲ್ಲ. ಕೆಲವು ತಿಂಗಳ ಹಿಂದೆ ನನ್ನ ಕಿವಿಗೆ ಬಿದ್ದ ಸುದ್ದಿ ಅದು ಎಷ್ಟು ನಿಜವೋ ಎಷ್ಟು ಸುಳ್ಳೋ ನನಗೆ ಗೊತ್ತಿಲ್ಲ. ಅವರ ಸಿಟ್ಟು ವಿಕೋಪಕ್ಕೆ ಹೋಗಿ ಒರತೆ ನೀರನ್ನು ನಮಗೆ ಉಪಯೋಗಿಸಲು ಬಿಡದಿದ್ದರೆ ಯಾರಿಗೂ ಉಪಯೋಗಿಸೋದಕ್ಕೆ ಬಿಡುವುದಿಲ್ಲ ಎಂದು ಒರತೆಯಲ್ಲಿ ಮೂತ್ರ ಮಾಡಿದ್ದರಂತೆ. ಗಲಭೆ ಎಬ್ಬಿಸಲು ಯಾರೋ ಸುಳ್ಳು ಸುದ್ದಿ ಹಬ್ಬಿಸಿದ್ದರೋ ಅಥವಾ ಅವರೇ ಒರತೆಯನ್ನು ಹೊಲಸೆಬ್ಬಿಸಿ ಬೇರೊಬ್ಬರ ತಲೆಗೆ ಕಟ್ಟಿದ್ದರೋ ಗೊತ್ತಿಲ್ಲ. ಒರತೆಯನ್ನು ಗಬ್ಬೆಬ್ಬಿಸಿದ್ದು ಸುಳ್ಳೋ ನಿಜವೋ ಅಂತೂ ಒರತೆಯ ಹೂಳು ತೆಗೆಸಬೇಕಾಗಿ ಬಂತು.

ಪ್ರತಿಕ್ರಿಯಿಸಿ: feedback@sudha.co.in